ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಇದ್ದೇ ಇದೆ. ಕಾನೂನಿಗೆ ವಿರುದ್ಧವಾಗಿ ವರ್ತಿಸಿದರೆ ಅದನ್ನು ಪ್ರತಿಬಂಧಿಸುವುದಕ್ಕೆ ನಿಯಮ ಇದೆ.

Sri K. PUTTASWAMY.—Sir, is it not a fact that this trade is almost ruinous to poor people ?

Sri Kadidal MANJAPPA.—I cannot say so, when the law allows it. If it is against law and if this trade is carried on against the provisions of law, Government can take action.

Sri K. PUTTASWAMY.—Has it not come to the notice of the Government that the interest is almost usurious ?

Sri Kadidal MANJAPPA.—If such instances are brought to the notice of Government, we can take action.

Sri K. PUTTASWAMY.—Has it not come to the notice of the Government that the rate of interest is usurious ?

Sri Kadidal MANJAPPA.—No, Sir. The rate of interest is fixed according to the Money Lenders' Act. If the Act is violated, we take action. But if voluntarily people are prepared to pay those rates of interest, then the Government is helpless.

Sri K. PUTTASWAMY.—My question was: 'has it not come to the notice of the Government '?

Sri Kadidal MANJAPPA.—There are Civil courts to look after such cases.

Licensed Money Lenders

Q.—1039. **Sri G. PAPANNA** (Sidlaghatta-Chickballapur).—

Will the Government be pleased to state :—

(*a*) when the Money Lenders' Act came into force in the State ;

(*b*) the number of money lenders possessing licence in the State other than those in Bangalore, Mysore, K.G.F. and Davangere ;

(*c*) whether it has come to their notice that these money lenders are purchasing the lands instead of mortgaging them in order to escape from the operation of this Act ?

A—**Sri Kadidal MANJAPPA** (Minister for Revenue and Public Works).—

(*a*) 1st July 1940.
(*b*) 538.
(*c*) No.

ಶ್ರೀ ಜಿ. ಪಾಪಣ್ಣ.—ಈ 538 ಮಂದಿ ಕಾನೂನು ಜಾರಿಗೆ ಬಂದಾಗ ಇದ್ದ ನಂಬರೋ, ಈಗಿನ ನಂಬರೋ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿರತಕ್ಕ ನಂಬರು.

ಶ್ರೀ ಜಿ. ಪಾಪಣ್ಣ.—ಈ ಆಕ್ಟಿನ ಮೇರೆಗೆ ಅವರು ಲೇವಾದೇವಿ ನಡೆಸುತ್ತಾ ಇದ್ದಾರೆಯೇ, ಇಲ್ಲವೇ ಎಂಬ ವರದಿ ವರ್ಷೇ ವರ್ಷೇ ಬರುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನೇ ಒಂದು ವರದಿಯನ್ನು ಕೇಳಿದ್ದೆ. ಈ ಆಕ್ಟನ್ನು ಅಷ್ಟು ಚುರುಕಾಗಿ ಜಾರಿಗೆ ಕೊಡುತ್ತಾ ಇಲ್ಲ ಎಂದು ಗಮನಕ್ಕೆ ಬಂದ ಮೇಲೆ ಸರಿಯಾದ ರೀತಿಯಲ್ಲಿ ಜಾರಿಗೆ ಕೊಡಬೇಕೆಂದು ಎಲ್ಲಾ ಅಧಿಕಾರಿಗಳಿಗೂ ಇನ್ಸ್ಪೆಕ್ಷನ್ ಕೊಡಲಾಗಿದೆ.

ಶ್ರೀ ಜಿ. ಪಾಪಣ್ಣ.—ತಾವು ಆರೀತಿ ವರದಿ ವರ್ಷೇ ವರ್ಷೇ ತರಿಸಿಕೊಳ್ಳದೆ ಇದು ಹೇಗೆ ಕೆಲಸ ಮಾಡುತ್ತಿವೆ ಎಂಬುದು ತಮ್ಮ ಗಮನಕ್ಕೆ ಬರದೇ ಹೋದರೆ ಈ ಕಾನೂನಿನಿಂದ ಏನು ಪ್ರಯೋಜನವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ವರದಿ ಕೊಡಬೇಕೆಂದು ಇದೆ.

ಶ್ರೀ ಜಿ. ಪಾಪಣ್ಣ.—ಇದರಿಂದ ಅನುಕೂಲಕ್ಕೆ ಬದಲಾಗಿ ಪ್ರತಿಕೂಲವಾಗುತ್ತಿದೆ ಎಂಬುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿಗದಿಯಾದ rate of interestಗಿಂತ ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ಜಿ. ಪಾಪಣ್ಣ.—ಈ ಕಾನೂನಿನಿಂದ ತಪ್ಪಿಸಿಕೊಳ್ಳಲು ಜಮೀನನ್ನು ಆಧಾರವಾಗಿ ಪಡೆಯುವುದಕ್ಕೆ ಬದಲಾಗಿ ಕ್ರಯಕ್ಕೆ ಪಡೆಯುತ್ತಿರುವುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಜನರು ತಾವೇ ಒಪ್ಪಿಕೊಂಡು ಜಮೀನು ಖರೀದಿಗೆ ಬರೆದು ಕೊಟ್ಟರೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

Complaints against Official Secretary, Taluk Multi-purpose Co-operative Society, Channapatna.

Q.—780. **Sri V. VENKATAPPA** (Channapatna).—

Will the Government be pleased to state :—

(*a*) whether it is not a fact that the President of the Taluk Multi-purpose Co-operative Society at Channapatna has made repeated complaints about the gross mismanagement of the society by the Official Secretary thereof and the grave irregularities which have resulted from such mismanagement ;

(*b*) if so, whether they will state what action has been taken to enquire into the allegations and set matters right ?

A.—**Dr. R. NAGAN GOWDA** (Minister for Agriculture).—

(*a*) No complaint has reached Government. The Department has

received the notes of inspection of the President.

(*b*) Does not arise. Departmental action has been taken to deal with the irregularities brought to notice.

ಶ್ರೀ ವಿ. ವೆಂಕಟಪ್ಪ.—ದೂರುಗಳೇನೂ ಸರ್ಕಾರದವರಿಗೆ ಬಂದಿಲ್ಲ ಎಂದು ಹೇಳಿದ್ದೀರಿ. ಸರ್ಕಾರದವರಿಗೆ ಎಂದರೆ ತಮಗೆ ತಿಳಿದುಬಂದಿಲ್ಲ ಅಂತಲೇ ?

*ಡಾ॥ ಆರ್. ನಾಗನಗೌಡ.—ಈ answer ಸ್ವಲ್ಪ ನಿಜವಾಗಿಯೂ technical ಆಗಿದೆ. ಪ್ರೆಸಿಡೆಂಟರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದಾರೆ.ಡೈರೆಕ್ಟ್‌ಗಿ ಗವರ್ನಮೆಂಟಿಗೆ ಬಂದಿಲ್ಲ ಎಂದು ಅರ್ಥ.

ಶ್ರೀ ವಿ. ವೆಂಕಟಪ್ಪ.—ನಾನು ಕೇಳುತ್ತಾ ಇರುವುದು ಈ ವಿಷಯದಲ್ಲಿ ತಮಗೆ ಕಾಗದಗಳು ಯಾವವೂ ಬಂದಿಲ್ಲವೆ ಎಂದು ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಅಸಿಸ್ಟೆಂಟ್ ರಿಜಿಸ್ಟ್ರಾರ್ ರವರಿಗೆ ಬಂದದ್ದು ಯಾವಾಗ ?

ಡಾ॥ ಆರ್. ನಾಗನಗೌಡ.—ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ 28ನೇ ಡಿಸೆಂಬರ್ 1953ರಲ್ಲಿ ಹೋಗಿದೆ. ಅವರು ಆ ಸ್ಥಳಕ್ಕೆ ಮರುದಿವಸವೇ ಹೋಗಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಸ್ಥಳಕ್ಕೆ ಹೋಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಡಾ॥ ಆರ್. ನಾಗನಗೌಡ.—ಅವರು accounts check ಮಾಡಿದ್ದಾರೆ. Stock Register check ಮಾಡಿದ್ದಾರೆ. ಯಾವ ಯಾವ ವಿಷಯದಲ್ಲಿ ಅವರಿಗೆ ದೂರು ಬಂದಿತ್ತೊ ಅದನ್ನೆಲ್ಲಾ ಪರಿಶೀಲಿಸಿದ್ದಾರೆ. Official Secretary ಅವರಿಗೆ ಇಕ್ಸ್‌ಪ್ಲನೇಷನ್ ಕೊಟ್ಟು set right ಮಾಡಿ ಬಂದಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಏನೇನು set right ಮಾಡಿದ್ದಾರೆ, ಸ್ವಾಮಿ ?

ಡಾ॥ ಆರ್. ನಾಗನಗೌಡ.—ಕ್ಯಾಷ್‌ಬುಕ್ ಬರೆದಿರಲಿಲ್ಲ, ಬರೆಸಿ ಬಂದಿದ್ದಾರೆ. ಆ ತರುವಾಯ ಸೇಫ್‌ನಲ್ಲಿ ದುಡ್ಡು ಇಟ್ಟಿರಲಿಲ್ಲ. ಅದಕ್ಕೆ ಕಾರಣ ಏನು ಎಂದು ವಿಚಾರಿಸಿದ್ದಾರೆ. ಕೆಲವು ದಿವಸಗಳ ಹಿಂದೆ ಅಲ್ಲಿನ ಅಗ್ರಿಕಲ್ಚರಲ್ ಆಫೀಸಿನಲ್ಲಿ ಕಳ್ಳರು ನುಗ್ಗಿ ಸಾಮಾನುಗಳು ಹೋಗಿದ್ದವು. ಆದ್ದರಿಂದ ಮನೆಯಲ್ಲಿ ದುಡ್ಡು ಇಟ್ಟುಕೊಂಡಿರಲಾಗಿತ್ತು ಎಂದು ಅವರು ಹೇಳಿದಮೇಲೆ ಆರೀತಿ ಇಟ್ಟುಕೊಳ್ಳಕೂಡದು ಎಂದು ಹೇಳಿಬಂದಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಎಷ್ಟು ಹಣವನ್ನು ಎಷ್ಟು ದಿವಸ ಅವರ ಜೊತೆಯಲ್ಲಿ ಇಟ್ಟುಕೊಂಡಿರಬಹುದು ಸ್ವಾಮಿ ?

ಡಾ॥ ಆರ್. ನಾಗನಗೌಡ.—ಇರಬಹುದು ಎಂದು ಅಲ್ಲ. ಎಷ್ಟು ದಿವಸ, ಎಷ್ಟು ಹಣ ಇಟ್ಟುಕೊಂಡಿದ್ದರು ಎಂಬ ಲೆಕ್ಕವಿದೆ. ಡಿಸೆಂಬರ್ 7ನೇ ತಾರೀಖಿನಿಂದ ಪ್ರೆಸಿಡೆಂಟರು ಬಂದು ತನಿಖೆಮಾಡುವವರೆಗೂ ಎಂದರೆ 25ನೇ ತಾರೀಖಿನವರೆಗೂ ಆ ದುಡ್ಡು ಅವರ ಹತ್ತಿರ ಇತ್ತು. ಅಮೌಂಟ್ ಎಷ್ಟು ಅಂದರೆ ಒಟ್ಟು ರೂ. 1,049-7-2 ಇದ್ದದ್ದು. ಅದರಲ್ಲಿ ರೂ. 894-0-8 ಸೆಕ್ರೆಟರಿ ಹತ್ತಿರ ಇತ್ತು, ರೂ. 155-6-6 ಕ್ಯಾಷ್ ಬಾಕ್ಸ್‌ನಲ್ಲಿ ಇತ್ತು. ಅವರು ತಾಲ್ಲೂಕು ಇಕ್ಸ್‌ಪೆಕ್ಟರು; ಅವರ ಕೆಲಸದ ಜೊತೆಯಲ್ಲಿ ಈ ಸೊಸೈಟಿಗೆ ಎಕ್ಸ್ ಆಫಿಷಿಯೋ ಸೆಕ್ರೆಟರಿ ಆಗಿ ಇದ್ದಾರೆ. ಎರಡು ಕೆಲಸವನ್ನೂ ಮಾಡುತ್ತಾರೆ.

ಶ್ರೀ ವಿ. ವೆಂಕಟಪ್ಪ.—ದುಡ್ಡನ್ನು ಎಷ್ಟುದಿವಸ ಅವರ ಹತ್ತಿರ ಇಟ್ಟುಕೊಂಡಿರಬಹುದು, ಎಷ್ಟುದಿವಸ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ ಎಂದು ನಾನು ಕೇಳಿದ್ದು ?

ಡಾ॥ ಆರ್. ನಾಗನಗೌಡ.—ಒಂದು ದಿವಸ ಸಹ ಇಟ್ಟುಕೊಳ್ಳಕೂಡದು.

ಶ್ರೀ ವಿ. ವೆಂಕಟಪ್ಪ.—ಆರೀತಿ ಇಟ್ಟುಕೊಂಡಿದ್ದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ನನಗೆ ಈ ವರದಿ ಈ ತಿಂಗಳಿನಲ್ಲಿ ಬಂದಿದೆ. ಇದು ಹೇಗೆ ಆಯಿತು ಎಂಬುದನ್ನು ತಿಳಿದುಕೊಂಡು ಅದರಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಿ. ವೆಂಕಟಪ್ಪ.—ಹಿಂದೆ ಸಾಮಾನುಗಳನ್ನು ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಿ, ಸಿಕ್ಕಿಬಿದ್ದು ತಮ್ಮ ಡಿಪಾರ್ಟ್‌ಮೆಂಟಿನ ಗಮನಕ್ಕೆ ಬಂದಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಆ ಇಕ್ವಿರ್ಮೇಷನ್ ನನಗೆ ತಿಳಿಯದು ಮತ್ತು ಈ ಪ್ರಶ್ನೆಯಿಂದ ಅದು ಉದ್ಭವಿಸುವುದಿಲ್ಲ. ಆದಕಾರಣ ಎಕ್ಸ್‌ಪ್ಲೈರ್ ಮಾಡುವುದಕ್ಕೆ ಅವಕಾಶವಿರಲಿಲ್ಲ.

9-30 A.M.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣದಲ್ಲಿರುವ ಸಮಗ್ರಸೇವಾ ಸಹಕಾರ ಸಂಘದ ಅಕ್ರಮಗಳ ಸಂಬಂಧದಲ್ಲಿ ಏನು ಕಾರ್ಯಕ್ರಮ ಕೈಗೊಂಡಿದೆ ಯೆಂಬುದನ್ನು ಹೇಳಲು ಸಾಧ್ಯವಿಲ್ಲವೆ ?

ಡಾ॥ ಆರ್. ನಾಗನಗೌಡ.—ಈ ಸಂಬಂಧದಲ್ಲಿ ಡಿಸೆಂಬರಿನಲ್ಲಿ ಲೇಚೆಸ್ಟ್ಯಾಗಿ ಏನಾಯಿತೆಂದು ಒಂದು ವರದಿ ಬಂದಿದೆ. ಪೂರ್ವದಲ್ಲಿ ಈ ಸಂಘ ಯಾವ ರೀತಿ ಕೆಲಸ ಮಾಡಿದೆಯೆಂಬುದಕ್ಕೆ ವರದಿ ತರಿಸುತ್ತೇನೆ.

ಶ್ರೀ ಜಿ. ಬಸಪ್ಪ.—ಅಕಾರಾ ಕಛೇರಿಗೆ ಅರ್ಜಿ ಬಂದರೆ ಸರ್ಕಾರಕ್ಕೆ ದೂರು ಬಂದ ಹಾಗೆ ಭಾವಿಸುತ್ತೀರೋ ಅಥವಾ ಬೇರೆ ಕಡೆಗೆ ಡಿಸ್ಪ್ಯಾಕ್ಟ್ ಮತ್ತು ತಾಲ್ಲೂಕು ಕ್ಷೇತ್ರಗಳಲ್ಲಿರುವ ಆಫೀಸುಗಳಿಗೆ ಬಂದರೂ ಸಹ ಸರ್ಕಾರಕ್ಕೆ ಬಂದಿದೆಯೆಂದು ಭಾವಿಸುತ್ತೀರೋ ?

(ಉತ್ತರವಿಲ್ಲ)

SHORT NOTICE QUESTIONS AND ANSWERS

Fire Accident at Bommenahally.

Q.—16. Sri G. SIVAPPA (Holalkere). —

Will the Government be pleased to state :—

(*a*) how many hay heaps were burnt by fire accident on 1st March 1954 at the village of Bommenahally near Davangere City ;

(*b*) the total loss of the fire accident to the ryots of the village ;